# ಸಿಂಧುದುರ್ಗ ಕೋಟೆಯಲ್ಲಿ..



ಸುಮಾರು 50 ಎಕ್ರೆ ವಿಸ್ತಾರದಲ್ಲಿ ಹರಡಿಕೊಂಡಿರುವ ಈ ಕೋಟೆ ಸುಂದರ ಬೀಚ್‌ಗಳು ಮತ್ತು ನಯನಮನೋಹರ ಪ್ರಕೃತಿ ದೃಶ್ಯಕ್ಕೆ ಹೆಸರುವಾಸಿ.

★ ಸುಬ್ಬರಾವ್ ಎನ್.ಕೆ.

ಒಂದು ದಿಕ್ಕಿನಲ್ಲಿ ಪಶ್ಚಿಮ ಘಟ್ಟ, ಇನ್ನೊಂದೆಡೆ ಅರಬ್ಬಿ ಸಮುದ್ರ. ಮಧ್ಯೆ ವಿರಾಜಮಾನವಾಗಿರುವ ಸಿಂಧುದುರ್ಗವು, ಸುಂದರ ಕಡಲಕಿನಾರೆ, ಹಿನ್ನೀರು, ಜಲಪಾತಗಳು, ಕೋಟೆಗಳು ಮತ್ತು ಪ್ರಾಕೃತಿಕ ಸೌಂದರ್ಯದಿಂದಾಗಿ ಹೆಸರುವಾಸಿಯಾಗಿದೆ. ಸಿಂಧು ಎಂದರೆ ಸಮುದ್ರ ಮತ್ತು ದುರ್ಗ ಎಂದರೆ ಕೋಟೆ. ಮಹಾರಾಷ್ಟ್ರದ ಕೊಂಕಣ ಪ್ರದೇಶದಲ್ಲಿರುವ ಮಾಲ್ವನ್ ದ್ವೀಪದಲ್ಲಿರುವ ಈ ಕೋಟೆ ಧಾರ್ಮಿಕ ಪ್ರವಾಸೋದ್ಯಮಕ್ಕೂ ಹೆಸರುವಾಸಿ.

ಶಿವಾಜಿ ಮಹಾರಾಜರು ತಮ್ಮ ಕಾರ್ಯತಂತ್ರಗಳನ್ನು ಬಳಸಿ ವಿದೇಶಿ ಪಡೆಗಳನ್ನು ಬಗ್ಗುಬಡೆಯಲು ಮತ್ತು ಮುರುದ್ ಜಂಜೀರದ ಸಿದ್ದಿಗಳ ಸುರಕ್ಷೆಗಾಗಿ ಕಲ್ಲು ಬಂಡೆಗಳಿಂದ ಕೂಡಿದ ಈ ದ್ವೀಪವನ್ನು ಆಯ್ಕೆ ಮಾಡಿಕೊಂಡಿದ್ದರು. ಈ ಕೋಟೆಯ ವಿಶೇಷವೆಂದರೆ ಅರಬ್ಬೀ ಸಮುದ್ರದಿಂದ ಬರುವ ಶತ್ರುಗಳಿಗೆ ಇದು ಸುಲಭವಾಗಿ ತೋರದ ರೀತಿಯಲ್ಲಿ ಇದನ್ನು ನಿರ್ಮಿಸಲಾಗಿದೆ.

ಅಂಕುಡೊಂಕಾದ ಆಕಾರದಲ್ಲಿ 42 ರಕ್ಷಣಾ ಬುರುಜುಗಳನ್ನು ಹೊಂದಿರುವ ಈ ಕೋಟೆಯ ತಳಪಾಯಕ್ಕೆ ಸುಮಾರು 73 ಸಾವಿರ ಕೆ.ಜಿ ತೂಕದ ಕಬ್ಬಿಣದ ಸಾಮಗ್ರಿಗಳನ್ನು ಬಳಸಲಾಗಿತ್ತಂತೆ. ಮೂರು ವರ್ಷಗಳ ನಿರಂತರ ಶ್ರಮದಿಂದ ಕಟ್ಟಿದ ಈ ಕೋಟೆಗೆ ಗೋವಾದ 100 ಪೋರ್ಚುಗೀಸ್ ವಾಸ್ತುಶಿಲ್ಪಿಗಳ ಹಾಗೂ 3000 ಬಲಶಾಲಿ ಕಾರ್ಮಿಕರ ಸೇವೆಯನ್ನು ಬಳಸಲಾಗಿದೆ.

50 ಎಕರೆ ವಿಸ್ತಾರದ ಪ್ರದೇಶದಲ್ಲಿ ಚಾಚಿಕೊಂಡಿರುವ ಈ ಕೋಟೆ 9 ಮೀಟರ್ ಎತ್ತರದ ಗೋಡೆಯನ್ನು ಹೊಂದಿದೆ. ಒಂದು ಕಾಲದಲ್ಲಿ ಸಮುದ್ರ ಪ್ರಯಾಣವನ್ನು ಪವಿತ್ರ ಗ್ರಂಥಗಳು ನಿಷೇಧಿಸಿದಾಗಲೂ, ಸಮುದ್ರದಲ್ಲಿಯೇ ಈ ಬೃಹತ್ ಕೋಟೆಯ ನಿರ್ಮಾಣ ಮರಾಠಾ ರಾಜನ ಕ್ರಾಂತಿಕಾರಿ ಮನೋಭಾವವನ್ನು ತೋರಿಸುತ್ತದೆ. ಈ ಕೋಟೆಯ ವೈಭವವನ್ನು ವೀಕ್ಷಿಸಲೆಂದೇ ದೇಶದ ವಿವಿಧೆಡೆಗಳಿಂದ ಪ್ರವಾಸಿಗರು ತಂಡೋಪತಂಡವಾಗಿ ಭೇಟಿ ನೀಡುತ್ತಿದ್ದಾರೆ. ಇತಿಹಾಸಪ್ರಿಯರ ನೆಚ್ಚಿನ ಅಧ್ಯಯನ ತಾಣವೂ ಇದಾಗಿದೆ.

ಸಿಂಧುದುರ್ಗ ಬರೀ ಕೋಟೆ ಮಾತ್ರವಲ್ಲದೆ, ಕಡಲ ಕಿನಾರೆಗಳಿಗೂ ಪ್ರಸಿದ್ಧಿಯಾಗಿದೆ. ಇಲ್ಲಿರುವ ಮೋಚೆಮದ್ ಬೀಚ್ ಅತ್ಯಂತ ರಮಣೀಯವಾಗಿದ್ದು ಇದನ್ನು 'ಗೋಲ್ಡನ್ ಸ್ಯಾಂಡ್ ಬೀಚ್' ಎಂದೇ ಕರೆಯಲಾಗುತ್ತದೆ. ಅರಬ್ಬಿ ಸಮುದ್ರದ ಅಲೆಗಳು ಭಾರೀ ಗಾತ್ರದಲ್ಲಿ ದಡಕ್ಕೆ ಬಂದು ಅಪ್ಪಳಿಸುವ ದೃಶ್ಯವಂತೂ ರೋಮಾಂಚನ ವನ್ನುಂಟು ಮಾಡುತ್ತದೆ. ಅಪರೂಪದ ಪ್ರಕೃತಿ ಸೌಂದರ್ಯ, ಸುತ್ತಲೂ ಹಸಿರಿನಿಂದ ಕೂಡಿದ ಮರಗಳ ಸಾಲು ಅತ್ಯಂತ ಮನಮೋಹಕ. ಕಡಲ

